## ಮಾನ್ಯ ಹಿರಿಯ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ

ಅ.ದಾ ನಂ.21/2026

ವಾದಿ: ಕರಬಸನಗೌಡ ಪಾಟೀಲ್

-: ವಿರುದ್ಧ :-

ಪ್ರತಿವಾದಿಯರು: ಸಂಪತ್‌ಕುಮಾರ್ ಯು.ಪಿ

### ವ್ಯವಹಾರ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4 ರ ಮೇರೆಗೆ ವಾದಿಯು ಸಲ್ಲಿಸಿದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಏನೆಂದರೆ,

10/8/26

**ಕರಬಸನಗೌಡ ಪಾಟೀಲ್ ಬಿನ್ ಅಣ್ಣಾಜಿಗೌಡ ಪಾಟೀಲ್**, ವಯಸ್ಸು: 53 ವರ್ಷ, ವ್ಯವಸಾಯಗಾರರು, ಕ್ಯಾಸನೂರು ಗ್ರಾಮದ ವಾಸಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಆದ ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ,

1) ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ದಾವೆಯ ಸಂಪೂರ್ಣ ವಿದ್ಯಮಾನಗಳನ್ನು ನಾನು ತಿಳಿದುಕೊಂಡಿರುತ್ತೇನೆ. ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ನಾನು ಸಲ್ಲಿಸಿರುವ ವಾದ ಪತ್ರವನ್ನು ಈ ಪ್ರಮಾಣ ಪತ್ರದ ಒಂದು ಭಾಗವನ್ನಾಗಿ ಪರಿಗಣಿಸುವಂತೆ, ಪ್ರಾರ್ಥನೆ.

2) 1ನೇ ಪ್ರತಿವಾದಿಯು 2 ಮತ್ತು 3ನೇ ಪ್ರತಿವಾದಿಯ ತಂದೆಯಾಗಿರುತ್ತಾರೆ ಹಾಗೂ ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರುಗಳಾಗಿದ್ದು, ನನಗೆ ಪರಿಚಯಸ್ಥರಾಗಿರುತ್ತಾರೆ. 1ನೇ ಪ್ರತಿವಾದಿಯ ಹೆಸರಿಗೆ ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಕಸಬಾ ಹೋಬಳಿ, ಉದ್ರಿ ಗ್ರಾಮದ ಸ.ನಂ.129/3 ರಲ್ಲಿ 03 ಎಕರೆ 34 ಗುಂಟೆ ಜಮೀನು ಇದ್ದು, ಅದರಲ್ಲಿ 0-30 ಗುಂಟೆ ಖರಾಬು ವಜಾಜಾತ ನಿವ್ವಳ 03

K.A.PATIL

ಎಕರೆ 04 ಗುಂಟೆ ಜಮೀನಿನ ಖಾತೆ ಮತ್ತು ಪಹಣಿ ಇದ್ದು, ಸದರಿ ಸ್ವತ್ತು ಎಂ.ಆರ್ ನಂ.ಹೆಚ್6/2023-24 ರಂತೆ ಹಕ್ಕು ಬದಲಾವಣೆಯಾಗಿ ನಂತರ ಪೋಡಿ ದುರಸ್ತಿ ಮೇರೆಗೆ 1ನೇ ಪ್ರತಿವಾದಿಯ ಹೆಸರಿಗೆ ಖಾತೆ ಮತ್ತು ಪಹಣಿ ನಮೂದಾಗಿರುತ್ತದೆ. ಸದರಿ ಸ್ವತ್ತು ಪ್ರತಿವಾದಿಯರ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿ ಸ್ವತ್ತಿಗೆ ಪ್ರತಿವಾದಿಯರು ಜಂಟಿ ಮಾಲೀಕರು, ಹಕ್ಕುದಾರರು ಮತ್ತು ಸ್ವಾಧೀನದಾರರಾಗಿರುತ್ತಾರೆ. ಸದರಿ ಸ್ವತ್ತಿನ ಪೈಕಿ 02-00 ಎಕರೆ ತರಿ ಜಮೀನನ್ನು ಈ ದಾವೆಯ ಶೆಡ್ಯೂಲ್ ಸ್ವತ್ತೆಂದು ಬಣ್ಣಿಸಲಾಗಿದೆ.

1) ಪ್ರತಿವಾದಿಯರು 2024ನೇ ಇಸವಿ ನವೆಂಬರ್ ತಿಂಗಳ ಕೊನೆಯ ವಾರದಲ್ಲಿ ಅವರ ಕುಟುಂಬದ ಗೃಹಕೃತ್ಯದ ಹಣಕಾಸಿನ ಅಡಚಣೆ ಸಂಬಂಧ ಹಾಗೂ ಕೈಗಡ ಸಾಲಗಳ ತಿರುವಳಿ ಸಂಬಂಧ ಮತ್ತು 2ನೇ ಪ್ರತಿವಾದಿಯ ಮದುವೆಯ ಸಂಬಂಧ ಹಣದ ಆವಶ್ಯಕತೆ ಇರುವುದಿಂದ ಶೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಕೊಡುವುದಾಗಿ ಅಲ್ಲಲ್ಲಿ ಪ್ರಚುರ ಪಡಿಸಿದ್ದರಿಂದ, ವಿಷಯ ತಿಳಿದ ನಾನು ಶೆಡ್ಯೂಲ್ ಸ್ವತ್ತಿಗೆ ಬೇಟಿ ನೀಡಿ, ದಾಖಲೆಗಳನ್ನು ಪರಿಶೀಲಿಸಿ, ಶೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಮುಂದೆ ಬಂದು, ದಾವಾ ಶೆಡ್ಯೂಲ್ ಸ್ವತ್ತಿಗೆ **18,00,000/- (ಹದಿನೆಂಟು ಲಕ್ಷ)** ರೂಗಳಿಗೆ ಬೆಲೆ ನಿಗಧಿ ಮಾಡಿ, ಕ್ರಯಕ್ಕೆ ಪಡೆಯಲು ಕೇಳಿರುತ್ತೇನೆ. ಸದರಿ ಬೆಲೆಯು ಪ್ರತಿವಾದಿಯರಿಗೆ ತೃಪ್ತಿದಾಯಕವಾದ ಮತ್ತು ಪ್ರತಿವಾದಿಯರ ನಿರೀಕ್ಷೆಗೆ ಮೀರಿದ ಬೆಲೆಯಾಗಿದ್ದರಿಂದ ಹಾಗೂ ಆಗಿನ ಚಾಲ್ತಿ ಮಾರುಕಟ್ಟೆ ಬೆಲೆಗೆ ಅನುಸರಿಸಿದ್ದಾಗಿದ್ದರಿಂದ ಶೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗಳು **18,00,000/- (ಹದಿನೆಂಟು ಲಕ್ಷ)** ರೂಗಳಿಗೆ ನನಗೆ ಕ್ರಯಕ್ಕೆ ನೀಡಿದ್ದು ಇರುತ್ತದೆ.

2) ಪ್ರತಿವಾದಿಯರು ನನಗೆ ದಾವಾ ಶೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ನೀಡಿ, ಸದರಿ ಶೆಡ್ಯೂಲ್ ಸ್ವತ್ತಿನ ಕ್ರಯದ ಪ್ರತಿಫಲವಾದ **18,00,000/- (ಹದಿನೆಂಟು ಲಕ್ಷ)** ರೂಗಳ ಪೈಕಿ ನನ್ನಿಂದ **15,00,000/- (ಹದಿನೈದು ಲಕ್ಷ)** ರೂಗಳನ್ನು ನಾನು ಬ್ಯಾಂಕ್ ಖಾತೆ ಹೊಂದಿರುವ

K.A.PATIL

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಚಿಕ್ಕಾಂಶಿ ಹೊಸೂರು, ಹಾನಗಲ್ ತಾಲ್ಲೂಕು ಶಾಖೆಯ ಖಾತೆಯಿಂದ 1ನೇ ಪ್ರತಿವಾದಿಯಾದ ಸಂಪತ್ ಕುಮಾರ್ ಯು.ಪಿ ಇವರು ಖಾತೆ ಹೊಂದಿರುವ ಕೆನರಾ ಬ್ಯಾಂಕ್ ಸೊರಬ ಶಾಖೆಯ ಖಾತೆ ನಂ.057310103208 ರ ಖಾತೆಗೆ ಆರ್.ಟಿ.ಜಿ.ಎಸ್ ಮಾಡುವುದರ ಮೂಲಕ ಹಣ ವರ್ಗಾವಣೆ ಮಾಡಿದ್ದು, ಅದೇ ರೀತಿ **2,00,000 (ಎರಡು ಲಕ್ಷ)** ರೂಗಳನ್ನು ನಗದಾಗಿ ನನ್ನಿಂದ ಪ್ರತಿವಾದಿಯರು ಪಡೆದುಕೊಂಡಿದ್ದು, ಹೀಗೆ ಒಟ್ಟು **17,000,000/- (ಹದಿನೇಳು ಲಕ್ಷ)** ರೂಗಳನ್ನು ಮುಂಗಡ ಹಣವಾಗಿ ಪಡೆದುಕೊಂಡಿದ್ದು, **1,00,000/- (ಒಂದು ಲಕ್ಷ)** ರೂಗಳನ್ನು ಕ್ರಯಪತ್ರ ನೋಂದಣಿ ಸಮಯದಲ್ಲಿ ಪಡೆದುಕೊಳ್ಳಲು ಪ್ರತಿವಾದಿಯರು ಒಪ್ಪಿಕೊಂಡು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ.

3) ಪ್ರತಿವಾದಿಯರು ನನ್ನಿಂದ ಮುಂಗಡವಾಗಿ **17,000,000/- (ಹದಿನೇಳು ಲಕ್ಷ)** ರೂಗಳನ್ನು ಮುಂಗಡ ಹಣವಾಗಿ ಪಡೆದುಕೊಂಡು ಆ ಬಗ್ಗೆ ಸದರಿ ಕ್ರಯದ ವ್ಯವಹಾರದ ಬಾಬ್ತು ಪ್ರತಿವಾದಿಯರು ನನಗೆ ದಿನಾಂಕ 04/12/2024 ರಂದು ದಾವಾ ಶೆಡ್ಯೂಲ್ ಸ್ವತ್ತಿನ ಸಂಬಂಧ ಒಂದು ಸ್ವಾಧೀನ ರಹಿತ ಕ್ರಯದ ಕರಾರು ಪತ್ರವನ್ನು ಬರೆಯಿಸಿ, ಸದರಿ ಕ್ರಯದ ಕರಾರು ಪತ್ರವನ್ನು ಸೊರಬದ ಉಪ-ನೊಂದಣಾಧಿಕಾರಿಗಳ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ನಂ. ಎಸ್.ಆರ್.ಬಿ-1-03865-2024-25 ನೋಂದಣಿ ಮಾಡಿಸಿಕೊಟ್ಟಿರುತ್ತಾರೆ. ಸದರಿ ನೊಂದಾಯಿತ ಕ್ರಯದ ಕರಾರು ಪತ್ರದಂತೆ ಶೆಡ್ಯೂಲ್ ಸ್ವತ್ತಿನ ಕ್ರಯ ಪತ್ರ ನೊಂದಣಿ ಸಂಬಂಧ ಅವಶ್ಯಕ ಕಂದಾಯ ದಾಖಲಾತಿಗಳನ್ನು ಸರಿಪಡಿಸಿಕೊಂಡು, ಅಂದರೆ ಕ್ರಯ ಪತ್ರ ನೋಂದಣಿಗೆ ಅವಶ್ಯವಿರುವ 11ಇ ನಕ್ಷೆ ಸೂಕ್ತ ಸಮಯದೊಳಗೆ ತಯಾರಿಸಿಕೊಂಡು, ನನ್ನಿಂದ ಬರಬೇಕಾದ ಬಾಕಿ ಹಣವಾದ **1,00,000/- (ಒಂದು ಲಕ್ಷ)** ರೂಗಳನ್ನು ಪಡೆದುಕೊಂಡು, ಕ್ರಯದ ಕರಾರು ಪತ್ರ ಆದ ಲಾಗಾಯ್ತಿನಿಂದ 06 ತಿಂಗಳ ಒಳಗಾಗಿ 11ಇ ನಕ್ಷೆ ತಯಾರಿಸಿ ನೊಂದಾಯಿತ ಕ್ರಯ

Name: Syed Abdul Rehaman

K.A.PATIL

ಪತ್ರ ಬರೆದುಕೊಡುವುದಾಗಿ, ಆ ಮೇರೆಗೆ ಕ್ರಯ ಪತ್ರ ನೊಂದಣಿ ಕಾಲದಲ್ಲಿ ಶೆಡ್ಯೂಲ್ ಸ್ವತ್ತಿನ ಸ್ವಾಧೀನ ವಹಿಸಿಕೊಡುವುದಾಗಿ ಕರಾರು ಪತ್ರ ಬರೆದುಕೊಟ್ಟಿದ್ದು ಇರುತ್ತದೆ.

4) ನಾನು ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳಲು ಸದಾ ತಯಾರಿಯಲ್ಲಿ ಇರುತ್ತೇನೆ. ಆ ಬಗ್ಗೆ ನಾನು ಪ್ರತಿವಾದಿಯರನ್ನು 2025ನೇ ಇಸವಿ ಜುಲೈ ತಿಂಗಳಲ್ಲಿ ಸಂಪರ್ಕಿಸಿ, ಸದರಿ ದಾವಾ ಶೆಡ್ಯೂಲ್ ಸ್ವತ್ತಿನ ಸಂಬಂಧ ನೋಂದಾಯಿತ ಕ್ರಯ ಪತ್ರ ಬರೆದುಕೊಡುವಂತೆ ಕೇಳಿಕೊಂಡಿದ್ದು ಇರುತ್ತದೆ. ಅದಕ್ಕೆ ಪ್ರತಿವಾದಿಯರು 11ಇ ನಕ್ಷೆ ತಯಾರಾಗಿರುವುದಿಲ್ಲ, ಪಹಣೆ ಪತ್ರಿಕೆಯಲ್ಲಿ ಅ ಖರಾಬು ಮತ್ತು ಬ ಖರಾಬಿನ ವ್ಯತ್ಯಾಸವಿರುತ್ತದೆ. ಸದರಿ ವ್ಯಾತ್ಯಾಸವನ್ನು ಸರಿ ಪಡಿಸಲು ಕಂದಾಯ ಅಧಿಕಾರಿಗಳ ಬಳಿ ವ್ಯವಹರಿಸುತ್ತಿದ್ದು, ಸರಿಯಾದ ತಕ್ಷಣ 11-ಇ ನಕ್ಷೆ ತಯಾರಿಸಿ ಕ್ರಯ ಪತ್ರ ನೋಂದಣಿ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ. ಈ ರೀತಿ ಹೇಳಿದ ಪ್ರತಿವಾದಿಯರ ಮಾತನ್ನು ನಾನು ನಂಬಿಕೊಂಡು ಬಂದಿದ್ದು ಇರುತ್ತದೆ. ನಂತರ ಪ್ರತಿವಾದಿಯರು ಸದರಿ ಶೆಡ್ಯೂಲ್ ಸ್ವತ್ತಿನ ಸಂಬಂಧ 11ಇ ನಕ್ಷೆಯ ಬಗ್ಗೆ ಯಾವುದೇ ರೀತಿಯ ಅರ್ಜಿಗಳನ್ನು ಸಲ್ಲಿಸದೇ ಕಾಲಹರಣ ಮಾಡಿರುತ್ತಾರೆ. ಅಂತಿಮವಾಗಿ ನಾನು 2026ನೇ ಇಸವಿ ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಪ್ರತಿವಾದಿಯರನ್ನು ಸಂಪರ್ಕಿಸಿ, ದಾವಾ ಶೆಡ್ಯೂಲ್ ಸ್ವತ್ತಿನ ಸಂಬಂಧ ನೋಂದಾಯಿತ ಕ್ರಯ ಪತ್ರ ಬರೆದುಕೊಡುವಂತೆ ಕೇಳಿದ್ದು, ಅದಕ್ಕೆ ಪ್ರತಿವಾದಿಯರು 11ಇ ನಕ್ಷೆ ತಯಾರಾಗಿರುವುದಿಲ್ಲ ಎಂದು ಸಬೂಬು ಹೇಳಿರುತ್ತಾರೆ. ಆದರೆ ಅದಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆಯಲ್ಲಿ 11ಇ ನಕ್ಷೆ ದಾಖಲೆ ತೆಗೆಯಿಸಿ ನೋಡಲಾಗಿ ದಾವಾ ಶೆಡ್ಯೂಲ್ ಸತ್ತಿನ ಸಂಬಂಧ ಪ್ರತಿವಾದಿಯರು ನಕ್ಷೆ ತಯಾರಿಸಲು ಯಾವುದೇ ಅರ್ಜಿಗಳನ್ನು ಸಲ್ಲಿಸಿದ್ದು ಕಂಡು ಬಂದಿರುವುದಿಲ್ಲ. ಆ ಕಾರಣದಿಂದ ಪುನಃ ನಾನು ಪ್ರತಿವಾದಿಯರನ್ನು ಬೇಟಿ ಆಗಿ ಈ ವಿಚಾರವನ್ನು ಪ್ರತಿವಾದಿಯರಿಗೆ ತಿಳಿಸಲಾಗಿ ಪ್ರತಿವಾದಿಯರು ದಾವಾ ಶೆಡ್ಯೂಲ್ ಸ್ವತ್ತಿನ ಸಂಬಂಧ ಕ್ರಯ ಪತ್ರ ಬರೆದುಕೊಡಲು

K.A. PATIL

ನಿರಾಕರಣೆ ಮಾಡಿರುತ್ತಾರೆ ಆ ರೀತಿ ನಿರಾಕರಣೆ ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ.

5) ನಾನು ದಿನಾಂಕ 4/12/2024 ರಂದು ನೊಂದಾಯಿಸಲ್ಪಟ್ಟ ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳಲು ಸದಾ ತಯಾರಿರುತ್ತೇನೆ. ಪ್ರತಿವಾದಿಯರು ಅವರ ಭಾಗದ ನಿರ್ದಿಷ್ಟ ಕೋರಿಕೆಯನ್ನು ನೆರವೇರಿಸಲು ಪ್ರತಿವಾದಿಯರು ಕಾಲಹರಣ ಮಾಡುತ್ತಾ ಬಂದಿರುತ್ತಾರೆ. ಆ ರೀತಿ ಕಾಲಹರಣ ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ. ಹೀಗಿದ್ದಾಗಿಯೂ ಸದರಿ ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳದೇ ಕ್ರಯದ ಕರಾರು ಪತ್ರದಲ್ಲಿನ ಷರತ್ತುಗಳನ್ನು ಪ್ರತಿವಾದಿಯರು ಉಲ್ಲಂಘನೆ ಮಾಡುತ್ತಿದ್ದಾರೆ. ನಾನು ದಿನಾಂಕ 4/12/2024 ರ ನೊಂದಾಯಿತ ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳಲು ಸದಾ ತಯಾರಿಯಲ್ಲಿರುತ್ತಾರೆ. ಪ್ರತಿವಾದಿಯರು ಅವರ ಭಾಗದ ನಿರ್ಧೀಷ್ಟ ಕೋರಿಕೆಯನ್ನು ನೆರವೇರಿಸುವುದು ಅವರ ಕರ್ತವ್ಯವಾಗಿರುತ್ತದೆ.

6) ದಿನಾಂಕ 04/12/2024 ರ ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳುವ ಸಂಬಂಧ ನಾನು ನನ್ನ ವಕೀಲರ ಮೂಲಕ ದಿನಾಂಕ 07-03-2026 ರಂದು ನೊಂದಾಯಿತ ಅಂಚೆ ಮೂಲಕ ಪ್ರತಿವಾದಿಯರ ವಿಳಾಸಕ್ಕೆ ಕಾನೂನು ಬದ್ದ ನೋಟೀಸ್‌ನ್ನು ಕಳುಹಿಸಿದ್ದು ಇರುತ್ತದೆ. ಸದರಿ ನೋಟೀಸ್‌ನಲ್ಲಿ ನೊಂದಾಯಿತ ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳುವ ಸಂಬಂಧ ಪ್ರತಿವಾದಿಯರು ಅವರ ಭಾಗದ ನಿರ್ದಿಷ್ಟ ಕೋರಿಕೆಯನ್ನು ನೆರವೇರಿಸುವ ಸಂಬಂಧ ಸೊರಬದ ಉಪ-ನೊಂದಣಾಧಿಕಾರಿಗಳ ಕಛೇರಿಗೆ ದಿನಾಂಕ 20-03-2026 ರಂದು ಹಾಜರಾಗಿ ಕಛೇರಿ ಸಮಯದಲ್ಲಿ ನಾನು ಪ್ರತಿವಾದಿಗೆ ಪಾವತಿಸಬೇಕಾದ ಬಾಕಿ ಉಳಿದ ಹಣವಾದ **1,00,000/- (ಒಂದು ಲಕ್ಷ)** ರೂಗಳನ್ನು ನನ್ನಿಂದ ಪಡೆದುಕೊಂಡು

Name: Syed Abdul Rehaman
Area: Sorab
INDIA

K.A.PATIL

ದಾವಾ ಶೆಡ್ಯೂಲ್ ಸ್ವತ್ತಿನ ಸಂಬಂಧ ನೊಂದಾಯಿತ ಕ್ರಯ ಪತ್ರವನ್ನು ಮಾಡಿಕೊಡುವಂತೆ ತಿಳಿಸಿ, ನೊಟೀಸ್ ನೀಡಿದ್ದು ಇರುತ್ತದೆ.

7) ನಾನು ಕಳುಹಿಸಿದ ನೋಟೀಸ್‌ಗಳು ಪ್ರತಿವಾದಿಯರಿಗೆ ಜಾರಿಯಾಗಿದ್ದರೂ ಸಹಾ ದಿನಾಂಕ 20-03-2026 ರಂದು ಸೊರಬದ ಉಪ-ನೊಂದಣಾಧೀಕಾರಿಗಳ ಕಛೇರಿಗೆ ಪ್ರತಿವಾದಿಯರು ಬಂದು ಕ್ರಯ ಪತ್ರ ನೊಂದಣಿ ಮಾಡಿಕೊಟ್ಟಿರುವುದಿಲ್ಲ ಮತ್ತು ನೋಟೀಸ್‌ಗೆ ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ. ಈ ರೀತಿ ಪ್ರತಿವಾದಿಯು ನೊಂದಾಯಿತ ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳದೇ ಕ್ರಯದ ಕರಾರು ಪತ್ರದ ಷರತ್ತನ್ನು ಉಲ್ಲಂಘನೆ ಮಾಡಿರುತ್ತಾರೆ. ಆದರೆ, ನಾನು ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳವ ಸಂಬಂಧ ದಿನಾಂಕ 20/03/2026 ರಂದು ಸೊರಬದ ಉಪನೊಂದಣಾಧಿಕಾರಿಗಳ ಕಛೇರಿಯ ಸಮಯವಾದ ಬೆಳಗ್ಗೆ 10:00 ಇಂದ ಸಂಜೆ 5:00 ಗಂಟೆಯವರೆಗೆ ಪ್ರತಿವಾದಿಯರಿಗೆ ಬಾಕಿಯಾಗಿ ಪಾವತಿಸಬೇಕಾ ಕ್ರಯದ ಪ್ರತಿಫಲವಾದ 1,00,000/- (ಒಂದು ಲಕ್ಷ) ರೂಗಳನ್ನು ತಯಾರಿಯಲ್ಲಿಟ್ಟಿಕೊಂಡು, ಪ್ರತಿವಾದಿಯರು ಬರುವಿಕೆಯನ್ನು ಕಾದುನೋಡಿರುತ್ತೇನೆ. ಆದರೆ ಪ್ರತಿವಾದಿಯರು ಆ ದಿನ ಉಪನೋಂದಣಾಧಿಕಾರಿಗಳ ಕಛೇರಿಗೆ ಹಾಜರಾಗಿರುವುದಿಲ್ಲ. ನಾನು ನನ್ನ ಭಾಗದ ನಿರ್ದಿಷ್ಟ ಕೋರಿಕೆಯನ್ನು ನೆರವೇರಿಸಲು ಸದಾ ತಯಾರಿಯಲ್ಲಿ ಇರುತ್ತೇನೆ.

8) ಪ್ರತಿವಾದಿಯರು ಕ್ರಯದ ಕರಾರು ಪತ್ರದ ಷರತ್ತುಗಳನ್ನು ಉಲ್ಲಂಘನೆ ಮಾಡಿರುತ್ತಾರೆ. ನಾನು ದಿನಾಂಕ 04-12-2024 ರ ನೊಂದಾಯಿತ ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳಲು ಸದಾ ತಯಾರಿಯಲ್ಲಿದ್ದು, ಪ್ರತಿವಾದಿಯರು ಸದರಿ ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳದೇ ಕಾಲಹರಣ ಮಾಡುತ್ತಾ ಬಂದಿರುತ್ತಾರೆ. ಆ ಕಾರಣದಿಂದ ನಾನು ಪ್ರತಿವಾದಿಯ ವಿರುದ್ದ ದಾವಾ ಶೆಡ್ಯೂಲ್ ಸ್ವತ್ತಿನ ಸಂಬಂಧ ನೊಂದಾಯಿತ ಕ್ರಯದ

K.A. PATIL

ಕರಾರು ಪತ್ರದಂತೆ ಕ್ರಯ ಪತ್ರ ನೊಂದಣಿ ಮಾಡಿಸಿಕೊಳ್ಳುವ ಸಂಬಂಧ ಈ ದಾವೆಯನ್ನು ಸನ್ನಿದಿ ನ್ಯಾಯಾಲಯದಲ್ಲಿ ಸಲ್ಲಿಸುವ ಸಂಧರ್ಭ ಉಂಟಾಗಿರುತ್ತದೆ. ಪ್ರತಿವಾದಿಯರು ಉದ್ದೇಶ ಪೂರ್ವಕವಾಗಿ ಕ್ರಯದ ಕರಾರು ಪತ್ರದ ಅಂಶಗಳನ್ನು ಪಾಲನೆ ಮಾಡದೇ ಉಲ್ಲಂಘನೆ ಮಾಡಿದ್ದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬರುತ್ತದೆ. ಪ್ರತಿವಾದಿಯರು ನನಗೆ ದಾವಾ ಶೆಡ್ಯೂಲ್ ಸ್ವತ್ತಿನ ಸಂಬಂಧ ನೊಂದಾಯಿತ ಕ್ರಯ ಪತ್ರವನ್ನು ಮಾಡಿಕೊಡುವುದು ಅವರ ಆದ್ಯ ಕರ್ತವ್ಯವಾಗಿರುತ್ತದೆ. ಹೀಗಿದ್ದಾಗಿಯೂ ಪ್ರತಿವಾದಿಯರು ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಆದ್ದರಿಂದ ನಾನು ಪ್ರತಿವಾದಿಯರ ವಿರುದ್ಧ ದಾವಾ ಶೆಡ್ಯೂಲ್ ಸ್ವತ್ತಿನ ಸಂಬಂಧ ನಿರ್ದಿಷ್ಟ ಪರಿಹಾರ ಕೋರಿಕೆ ಕುರಿತು ಆ ಮೇರೆಗೆ ನೊಂದಾಯಿತ ಕ್ರಯ ಪತ್ರ ಬರೆಯಿಸಿಕೊಡುವುದರ ಸಂಬಂಧ ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ಸಲ್ಲಿಸುವ ಸಂಧರ್ಭ ಉಂಟಾಗಿರುತ್ತದೆ.

ಆದ್ದರಿಂದ ಮಾನ್ಯ ಸನ್ನಿದಿ ನ್ಯಾಯಾಲದವರು ದಾವಾ ಶೆಡ್ಯೂಲ್ ಸ್ವತ್ತಿನ ಸಂಬಂಧ ಪ್ರತಿವಾದಿಯರು ನನಗೆ ದಿನಾಂಕ: 04-12-2024 ರಂದು ಬರೆದುಕೊಟ್ಟ ನೊಂದಾಯಿತ ಕ್ರಯದ ಕರಾರು ಪತ್ರದಂತೆ ದಾವಾ ಶೆಡ್ಯೂಲ್ ಸ್ವತ್ತನ್ನು ನನಗೆ ಕ್ರಯ ಪತ್ರ ಬರೆದುಕೊಡುವುದರ ಮೂಲಕ ನೋಂದಣಿ ಮಾಡಿಸಿಕೊಡಲು, ಆ ಪ್ರಕಾರ ನನ್ನಿಂದ ಬಾಕಿ ಕ್ರಯದ ಪ್ರತಿಫಲವನ್ನು ಪಡೆದುಕೊಂಡು ಸ್ವತ್ತಿನ ಸ್ವಾದೀನ ವಹಿಸಿಕೊಡುವಂತೆ ಪ್ರತಿವಾದಿಗೆ ನಿರ್ದೇಶಿಸಬೇಕಾಗಿಯೂ, ಆ ಮೇರೆಗೆ ಪ್ರತಿವಾದಿಯರು ಅವರ ಭಾಗದ ನಿರ್ಧಿಷ್ಟ ಕೋರಿಕೆಯನ್ನು ನೆರವೇರಿಸುವಂತೆ ಆದೇಶಿಸುವಂತೆಯೂ, ಅದಕ್ಕೆ ಪ್ರತಿವಾದಿ ತಪ್ಪಿದಲ್ಲಿ ನ್ಯಾಯಾಲಯದ ಪ್ರತಿನಿಧಿ ಮೂಲಕ ದಾವಾ ಶೆಡ್ಯೂಲ್ ಸ್ವತ್ತಿನ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಡಬೇಕಾಗಿಯೂ ಮತ್ತು ಆ ಸಂಬಂಧ ಜರುಗುವ ಎಲ್ಲಾ ಕಾರ್ಯಗಳನ್ನು ನ್ಯಾಯಾಲಯದ ಪ್ರತಿನಿಧಿ ನೆರವೇರಿಸಲು ನಿರ್ದೇಶನ ನೀಡುವಂತೆಯೂ ಹಾಗೂ ಒಂದು ವೇಳೆ ನಾನು ದಾವಾ ಶೆಡ್ಯೂಲ್ ಸ್ವತ್ತಿನ ಸಂಭಂಧ ಕ್ರಯ ಪತ್ರ ನೋಂದಣಿ

Name: Syed Abdul Rehaman
Area: Sorab Revenue
INDIA

K.A.PATIL

ಮಾಡಿಕೊಳ್ಳಲು ಅರ್ಹನಲ್ಲ ಎಂದು ಮಾನ್ಯ ನ್ಯಾಯಾಲಯದವರು ತೀರ್ಮಾನಕ್ಕೆ ಬಂದಲ್ಲಿ ನಾನು, ಪ್ರತಿವಾದಿಗೆ ಪಾವತಿಸಿದ **17,00,000/- (ಹದಿನೇಳು ಲಕ್ಷ)** ರೂಗಳ ಅಸಲು ಹಣವನ್ನು ಮತ್ತು ಅದರ ಮೇಲಿನ 18% ರಷ್ಟು ಬಡ್ಡಿಯನ್ನು ಪ್ರತಿವಾದಿಯು ಹಣ ಪಡೆದ ಲಾಗಾಯ್ತಿನಿಂದ ದಾವೆಯ ಅಂತಿಮ ತೀರ್ಮಾನವಾಗುವವರೆಗೂ ಹಾಗೂ ಸದರಿ ಹಣ ಸಂದಾಯವಾಗುವವರೆಗೂ ಆಗುವ ಬಡ್ಡಿ ಲೆಕ್ಕಾಚಾರ ಮಾಡಿ, ನನಗೆ ಪ್ರತಿವಾದಿಯು ಪಾವತಿಸಲು ಆದೇಶಿಸುವಂತೆಯೂ ಹಾಗೂ ದಾವಾ ಸಂದರ್ಭಾನುಸಾರ ಖರ್ಚುವೆಚ್ಚಗಳಿಗೆ ಮತ್ತು ನ್ಯಾಯಾಲಯಕ್ಕೆ ತೋರುವ ಇತರೆ ಎಲ್ಲಾ ಪರಿಹಾರವನ್ನು ನನ್ನ ಪರವಾಗಿ ಪ್ರತಿವಾದಿಯ ವಿರುದ್ಧ ಆದೇಶ ಮಾಡಿ ತೀರ್ಪು ಮತ್ತು ಆಜ್ಞಾಪ್ತಿ ಮಾಡುವಂತೆ ಪ್ರಾರ್ಥನೆ.

ಈ ಮೇಲ್ಕಂಡ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡಿ ಹೇಳುತ್ತೇನೆ.

NOTARY, GOVT. OF INDIA — Name: Syed Abdul Rahaman, Sorab, Reg. No. LAW 43/LC../2021, Exp.Dt.21-6-2026

ಗುರುತಿಸುವ ವಕೀಲರು

K.A. PATIL
ಪ್ರಮಾಣ ಮಾಡುವವರು

ಸ್ಥಳ:ಸೊರಬ
ದಿನಾಂಕ:-05-08-2026
ತಿದ್ದುಪಡಿಗಳ ಸಂಖ್ಯೆ:-

Solemnly Affirmed/Sworn to before me ... the contents of this affidavit having been read over and explained to the deponent ... the language known to him who appeared perfectly to understand the same signed his name/made his mark in my presence
Place: SORAB
Dated 10/08/26
NOTARY

10/08/26

SYED ABDUL RAHAMAN
B.Com, LL.B
NOTARY
SORAB REVENUE TALUK

**ದಿನಾಂಕಃ 10.08.2026 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿ ಪರವಾಗಿ ಶ್ರೀ ಎಸ್ ಪಿ ನ್ ವಕೀಲರಿಂದಃ**

ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳೆಲ್ಲವೂ ನಿಜವಿದ್ದು, ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ಪಹಣಿ ನಿಪಿ–1, ದಿನಾಂಕಃ 04.12.2024 ರ ನೋಂದಾಯಿತ ಮೂಲ ಖರೀದಿ ಕರಾರುಪತ್ರ ನಿಪಿ–2, ನೋಟೀಸ್ ನಿಪಿ–3, 3 ಅಂಚೆ ರಸೀದಿಗಳನ್ನು ಒಟ್ಟಾರೆಯಾಗಿ ನಿಪಿ–4 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

K.A.PATIL

ಓ.ಹೇ.ಕೇ.ಸರಿ ಇದೆ.

10/8/26

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.